# ಧನ್ವಂತರಿಗೇ ಜ್ವರ! ಊರು ದೂರ!

ಕಾಟೇಜ್ ಕಡೆಗೆ ಹೊರಟ ಸಂಜಯ್, ದಾರಿಯಲ್ಲಿ ಶೆಟ್ಟರ ಮನೆಗೆ ಹೋದ. ಅಲ್ಲಿ ಆನಂದಣ್ಣ, ಸಂದೇಶ್, ನವ್ಯ ಸೇರಿದ್ದರು. ಎಲ್ಲರೂ ಈ ವಿಷಯವನ್ನೇ ಮಾತನಾಡುತ್ತ ಆತಂಕದಲ್ಲಿದ್ದರು. ಸಂಜಯ್ ಶೆಟ್ಟರನ್ನು ನೋಡಿ, 'ಶೆಟ್ಟರೇ ಏನಾಯಿತು?' ಎಂದು ಪ್ರಶ್ನಿಸಿದ.

ತಕ್ಷಣ ಸಂದೇಶ್ ತನ್ನ ಲ್ಯಾಪ್‌ಟಾಪ್ ಬಿಡಿಸಿ ಸಂಜಯನಿಗೆ ಒಂದು ಸುದ್ದಿ ತೋರಿಸಿದ. ಭಾರತದಲ್ಲಿ ಕೊರೊನಾ ಎಂಬ ಮಹಾಮಾರಿ ಹರಡಿಕೊಳ್ಳಲು ಪ್ರಾರಂಭವಾಗಿದೆ. ಅದರಿಂದ ಹಲವಾರು ಜನರು ಸಾಯುತ್ತಿದ್ದಾರೆ ಎನ್ನುವುದು ಆ ವರದಿ.

'ಕೊರೊನಾ ನಿಜಕ್ಕೂ ಜೋರಾಗಿ ಹರಡುತ್ತಿದ್ದರೆ ನೀವು ಯಾಕೆ ಈ ತರಹ ಕೂತಿದ್ದೀರಿ?' ಎಂದು ಸಂಜಯ್ ಕೇಳಿದ.

ನವ್ಯ ಮುಂದಾಗಿ ಹೇಳಿದಳು. 'ಬಾಬಣ್ಣನಿಗೆ ಬಂದ ಜ್ವರ ಕೊರೊನಾ ಇರಬೇಕು ಎಂದು ನಮ್ಮ ಅನುಮಾನ. ನಮ್ಮ ಕಾಟೇಜಿನಲ್ಲಿ ನಾಲ್ಕು ಹುಡುಗರು ಇದ್ದರು ತಾನೇ? ಅವರಲ್ಲಿ ಒಬ್ಬನಿಗೆ ಮೊನ್ನೆ ಸ್ವಲ್ಪ ಜ್ವರ ಬಂದಿತ್ತಂತೆ. ನಿನ್ನೆ ಎಲ್ಲರಲ್ಲೂ ಕಾಣಿಸಿಕೊಂಡಿತ್ತಂತೆ. ಅದು ಬಾಬಣ್ಣನಿಗೆ ತಗಲಿದ ಕೂಡಲೇ ಆ ನಾಲ್ವರಿಗೂ ಗಾಬರಿಯಾಯ್ತು. ಅವರು ತಕ್ಷಣ ಕಾಟೇಜ್ ಖಾಲಿ ಮಾಡಿ ನಿನ್ನೆ ಸಂಜೆ ಸೀತಾಪುರದಿಂದ ಮರಳಿ ಹೋಗಿದ್ದಾರೆ. ನಿನ್ನೆ ರಾತ್ರಿಯೇ ಮಂಗಳೂರಿಗೆ ಹೋಗುವ ಯೋಚನೆ ಅವರದ್ದು. ಇವತ್ತು ಮುಂಬಯಿಗೆ ಹಾರಿ ಹೋಗಿರಬಹುದು' ಅಂದಳು.

ಸಂಜಯ್ ವಿಷಯ ತಿಳಿದು ಬೆವರಿದ. ಶಾಸ್ತ್ರಿಗಳ ಮಾತು ನೆನಪಾಯಿತು. ಇದು ಈ ಊರಿನ ಜ್ವರ ಅಲ್ಲ, ಇದಕ್ಕೆ ನನ್ನ ಹತ್ರ ಔಷಧ ಇಲ್ಲ ಎಂದು ಶಾಸ್ತ್ರಿಗಳು ಆಗಲೇ ಹೇಳಿದ್ದರು. ಈಗ ಅನೇಕ ಜನರಿಗೆ ಜ್ವರ ಬಂದಿದೆ ಅಂದರೆ ಏನು ಮಾಡುವುದು? ಎಂದು ಸಂಜಯ್ ಯೋಚಿಸತೊಡಗಿದ. ಲ್ಯಾಪ್‌ಟಾಪ್ ತೆರೆದು ಕೊರೊನಾದ ಮಾಹಿತಿ ಪಡೆಯಲು ಮುಂದಾದ.

ಇಂಟರ್ನೆಟ್‌ನಲ್ಲಿ ಕೊರೊನಾದ ಬಗ್ಗೆ ಹಲವಾರು ಮಾಹಿತಿ ಸಿಕ್ಕಿತು. ಜನರು ಒಬ್ಬರಿಂದ ಒಬ್ಬರು ದೂರವಿರಬೇಕೆಂದೂ, ಮಾಸ್ಕ್ ಧರಿಸಬೇಕೆಂದೂ ಗೊತ್ತಾಯಿತು.

ಸಂಜಯ್ ಆನಂದಣ್ಣನ ಕಡೆಗೆ ತಿರುಗಿ ಹೇಳಿದ, 'ಆನಂದಣ್ಣ, ನಾವು ಮಂದಿಗೆ ಈಗ ಇದು ಕೊರೊನಾ ಎಂಬ ಮಹಾಮಾರಿ ಎಂದು ತಿಳಿಸಬೇಕು. ಜನರು ಒಬ್ಬರಿಗೊಬ್ಬರು ಸಂಪರ್ಕಕ್ಕೆ ಬಂದಾಗ ಇದು ಹರಡುವುದರಿಂದ ಜನ ಒಬ್ಬರ ಹತ್ತಿರ ಇನ್ನೊಬ್ಬರು ಹೋಗಬಾರದು. ಯಾರಿಗಾದರೂ ಜ್ವರ ಬಂದರೆ ಅವರನ್ನು ಸ್ಪರ್ಶಿಸುವುದಾಗಲೀ ಅವರ ಹತ್ತಿರ ಹೋಗುವುದಾಗಲೀ ಮಾಡಬಾರದು ಎಂಬ ಎಚ್ಚರಿಕೆಯನ್ನು ನೀಡಬೇಕು' ಎಂದ.

ಆನಂದಣ್ಣ 'ಕಾರಂತರೇ, ನೀವು ಹೇಳಿದ್ದನ್ನೆಲ್ಲಾ ನಾವು ಕೇಳಿದೆವು. ಆದರೆ ಇದು ಸರಿಯಲ್ಲ. ಒಬ್ಬರ ಹತ್ತಿರ ಇನ್ನೊಬ್ಬರು ಹೋಗದೆ ಇರ್ಲಿಕ್ಕೆ ಆಗ್ತದಾ? ಆಯಿತು, ಹಾಗೆಂದುಕೊಂಡು ನೀವು ಹೇಳಿದ್ದನ್ನು ಕೇಳಿದ್ರೆ ಜ್ವರ ಬಂದವರ ಹತ್ರ ಹೋಗದಿದ್ದರೆ ಹೇಗೆ? ಇದರಿಂದ ಜನ ಸಾಯುವುದಿಲ್ವ? ಇದು ಮನುಷ್ಯತ್ವನಾ? ಸೀತಾಪುರದ ಮಂದಿ ಯಾರು ಹೇಳಿದರೂ ಕೇಳ್ಲಿಕ್ಕಿಲ್ಲ...' ಅಂದರು.

ಸಂಜಯ್ ಅಸಹಾಯಕತೆಯಿಂದ ಶೆಟ್ಟರ ಕಡೆ ನೋಡಿದ. ಶೆಟ್ಟರು ಆನಂದಣ್ಣ ಹೇಳಿದ್ದು ಸರಿ ಅಂದರು.

ಸಂದೇಶ್ ಮತ್ತು ನವ್ಯ, ಸಂಜಯ್ ಸಹಾಯಕ್ಕೆ ಬಂದು ಒಬ್ಬರಿಂದ ಒಬ್ಬರು ದೂರ ಇರುವುದು

